ಆ) ಈ ರೀತಿ ಆದೇಶ ಹೊರಡಿಸಿದ್ದರೂ ಈ ಅಭ್ಯರ್ಥಿಗಳ ನೇಮಕಾತಿ ತಡವಾಗುತ್ತಿರುವುದಕ್ಕೆ ಕಾರಣಗಳೇನು?

ಇ) ಈ ಪಶುವೈದ್ಯ ಪರೀಕ್ಷಕರನ್ನು ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳುವಾಗಲೇ ಗ್ರಾಮೀಣ ಕೃಪಾಂಕ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಲಾಗುವುದೇ?

ಈ) ಎಲ್ಲಾ ನಿಯಮಗಳನ್ನು ಪಾಲಿಸಿದ್ದರೂ ಸಹ ನೇಮಕಾತಿಯ ವಿಳಂಬಕ್ಕೆ ಕಾರಣಗಳೇನು? ಈ ಅಭ್ಯರ್ಥಿಗಳನ್ನು ಎಂದಿನಿಂದ ನೇಮಕಾತಿ ಮಾಡಿಕೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 357 ಅಭ್ಯರ್ಥಿಗಳು, ಆದೇಶವನ್ನು ಸದ್ಯದಲ್ಲಿ ಹೊರಡಿಸಲಾಗುವುದು

ಆ) ನೇರ ನೇಮಕಾತಿ ಬಗ್ಗೆ ನಿರ್ಬಂಧ ಆದೇಶವಾದುದರಿಂದ ಹಾಗೂ ಇದು ಈಗ ತೆರವುಗೊಂಡಿರುವುದರಿಂದ

ಇ) ಹೌದು

ಈ) ನೇರ ನೇಮಕಾತಿ ನಿರ್ಬಂಧ ಆದೇಶವನ್ನು ಹಿಂತೆಗೆದುಕೊಂಡಿರುವುದರಿಂದ ನೇಮಕಾತಿ ಮಾಡುವ ಬಗ್ಗೆ ತೀವ್ರ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ

1067 (1208) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಆನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುವೈದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದ ಉದ್ದೇಶಿಸಿದೆಯೆ? ಇದಕ್ಕಾಗಿಯೇ ಒಂದು ವಿಶ್ವವಿದ್ಯಾಲಯ ಅವಶ್ಯಕತೆ ಇದೆಯೆ? ಇದರಿಂದ ಸರ್ಕಾರದ ಬೊಕ್ಕಸದ ಮೇಲೆ ಅನಗತ್ಯ ಹೆಚ್ಚು ಬೀಳುವುದಿಲ್ಲವೇ?

ಆ) ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ ಯಾವುದು? ಈ ರೀತಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಉಪಯೋಗಿಸುವ ಮಾನದಂಡ ಯಾವುವು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ವಿಷಯವು ಪರಿಶೀಲನೆಯಲ್ಲಿದೆ

ಆ) ಇನ್ನೂ ತೀರ್ಮಾನ ಆಗಿಲ್ಲ

ರಾಜ್ಯದಲ್ಲಿ ಇ.ಎಸ್.ಐ ಆಸ್ಪತ್ರೆಗಳ ಕೊರತೆ

1068 (1570) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಆನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?